Regd No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂವತ್ಸರ 31 ಸಂಚಿಕೆ 38] ಶುಕ್ರವಾರ 14—11—47 [ಬಿಡಿ ಪ್ರತಿ 3 ಪೈ

ಸುದ್ದಿಗಳು

ಮೈಸೂರು — ನಿನ್ನೆ ಸಂಜೆ ಮುಸ್ಲಿಂ ಕಾರ್ಮಿಕರು ಸಯ್ಯಾಜಿರಾವ್ ರಸ್ತೆಯಲ್ಲಿ ಮೆರವಣಿಗೆ ಹೋದರು.

ಂ ಂ

ಮೆರವಣಿಗೆಕಾರರು ಮೈಸೂರು ಧ್ವಜ, ಭಾರತ ಧ್ವಜ ಮತ್ತು ಪಾಕೀಸ್ತಾನ ಧ್ವಜವನ್ನು ಹಿಡಿದಿದ್ದರು.

ಂ ಂ

'ಮುಸ್ಲಿಂ ಲೀಬಂ ಜಿಂದಾಬಾದ್' 'ಬ್ಲಾಕ್ ಮಾರ್ಕೆಟ್ ಬಂದ್ ಕರೋ' ಎಂಬ ಘೋಷಣೆಗಳನ್ನು ಮಾಡುತ್ತಿದ್ದರು.

ಂ ಂ

ನಿನ್ನೆ ದಿವಸ ಬೆಳಿಗ್ಗೆ ಶ್ರೀ ನಂಜುಂಡೇಶ್ವರ ಮೋಟಾರು ಸರ್ವಿಸಿಗೆ ಎಡೆತೊರೆಯಲ್ಲಿ ಅರು ವರ್ಷದ ಬಾಲಕನೊಬ್ಬನು ಸಿಕ್ಕಿ ಸತ್ತನೆಂದು ವರದಿಬಂದಿದೆ.

ಂ ಂ

ಬ್ರಿಟಿಷ್ ಕಾಳಸಂತೆಯಲ್ಲಿ ನಿಜಾಂ ಸೇನಾಪತಿ ಜ॥ ಎಡ್ರೂಸ್ ಆಧುನಿಕ ಶಸ್ತ್ರಾಗಳನ್ನು ಕೊಂಡು ಹೈದರಾಬಾದಿಗೆ ಕಳಿಸಿದ್ದಾರೆ. ಚಲನೆಯುಳ್ಳ ಕಾರ್ಖಾನೆಯೊಂದು ಹೈದರಾಬಾದಿಗೆ ತಲುಪಿದೆಯೆಂದು ಸುದ್ದಿ.

ಂ ಂ

ಪಾಕೀಸ್ತಾನ ಪ್ರಭುತ್ವ ಫಿರೋಜ್ ಖಾರ್ ನೂರ್‌ನನ್ನು ಮಧ್ಯಪೂರ್ವಕ್ಕೆ ವಿಶೇಷ ನಿಯೋಗ ಕಳಿಸಿರುವ ವಿಷಯ ಈಗ ಗೊತ್ತಾಗಿದೆ ಟರ್ಕಿ ಮುಂತಾದ ಮುಸ್ಲಿಂ ರಾಷ್ಟ್ರಗಳಿಂದ ಅಧಿಕ ಶಸ್ತ್ರಾಗಳನ್ನು ಪಡೆಯುವ ಸಲುವಾಗಿಯೇ ಈ ನಿಯೋಗವೆಂದು ದೆಹಲಿಯಲ್ಲಿ ಹೇಳಲಾಗಿದೆ.

ಕರಾಚಿಯಲ್ಲಿರುವ ಜುನಗಡ ದಿವಾನರಾದ ಜುಟ್ಟೋರವರು ಇತ್ತೀರುವ ಹೇಳಿಕೆಯಲ್ಲಿ ಜುನಗಡ ಭಾರತ ಡೊಮಿನಿಯನ್ ಸೇರಿಲ್ಲವೆಂದೂ, ಮುಂದಿನ ಸಂಧಾನದ ಒಗ್ಗೆ ಜುನಗಡವನ್ನು ಭಾರತ ಸರ್ಕಾರದ ವಶಮಾಡಲಾಗಿದೆಯೆಂದೂ ತಿಳಿಸಿದ್ದಾರೆ.

ಂ ಂ

ಜುನಗಡದಿಂದ ಕೂಡಲೇ ಭಾರತ ಸೇನೆ ವಾಪಸ್ಸಾಗಬೇಕು : ಜುನಗಡ ರಾಜನಾಗಲೀ, ಮಂತ್ರಿಯಾಗಲಿ ಸಂಧಾನ ನಡೆಸಲಾರರು — ಎಂದು ಭಾರತ ಸರ್ಕಾರಕ್ಕೆ ಪಾಕೀಸ್ತಾನ ಸರ್ಕಾರ ಪ್ರತಿಭಟನೆಯನ್ನು ಸೂಚಿಸಿದೆ.

ಂ ಂ

ಹೈದರಾಬಾದು ಸಂಸ್ಥಾನದ ಬಳಿಯ ಜಿಲ್ಲೆಗಳಲ್ಲಿರುವ ಮುಸ್ಲಿಂ ಅಧಿಕಾರಿಗಳನ್ನು ದೂರಕ್ಕೆ ಪರ್ಗಾಯಿಸಿರಿ — ಇಲ್ಲದಿದ್ದರೆ ಅಪಾಯವಿದೆ ಎಂಬುದಾಗಿ ಆಂಧ್ರ ಹಿಂದೀ ಮಹಾಸಭೆಯವರು ಮದರಾಸು ಸರ್ಕಾರವನ್ನು ಕೇಳಿಕೊಂಡಿರುವರು.

ಂ ಂ

ಪಾಕೀಸ್ತಾನ ಪ್ರದೇಶದಿಂದ ಸಂಸ್ಥಾನದ ಗಡಿ ಒಳಿ ಗಲಭೆಯಾಯಿತೆಂದು ಭಾರತ ಸೇನೆ ತ್ರಿಪುರ ಸಂಸ್ಥಾನಕ್ಕೆ ಹೋಗಿದೆ.

ಂ ಂ

ರಾಜಧಾನಿಯ ಒಳೆ ಮುಂತಾದ ವ್ಯಾಪಾರಿಗಳಾದ ಸುಪ್ರಸಿದ್ಧ ಶ್ರೀ ಜಯಲಕ್ಷ್ಮೀ ಬ್ಯಾಂಗಲ್ ಸ್ಟೋರ್ಸಿನವರು ದೀಪಾವಳಿ – ಧನಲಕ್ಷ್ಮಿ ಪೂಜೆಯನ್ನು ವೈಭವದಿಂದ ಆಚರಿಸಿದರು. ನೆರದಿದ್ದವರಿಗೆಲ್ಲ ಪುಷ್ಪ, ತಾಂಬೂಲ, ಸಿಹಿ ಹಂಚಿದರು ಅವರು ಕಳಿಸಿರುವ ಅಂದವಾದ ದೀಪಾವಳಿ ಶುಭಾಶಯ ರಟ್ಟನ್ನು ಅದರಿಂದ ಸ್ವೀಕರಿಸಿದ್ದೇವೆ

ಬ್ರಿಟಿಷ್ ಕಾಳಸಂತೆಯಲ್ಲಿ ನೈಜಾಮರಿಗೆ ಆಯುಧಗಳು !

ಹೈದರಾಬಾದಿಗೆ ಎಚ್ಚರಿಕೆ

ಹೈದರಾಬಾದಿಗೆ ಜುನಘಡಕ್ಕಾದ ಗತಿಯೇ ಬರಬಹುದೆಂದು ಸರದಾರ ಪಟೇಲರು ಎಚ್ಚರಿಕೆ ಇತ್ತಿದ್ದಾರೆ.

ಪ್ರ. ಪ್ರ. ಸಭೆ

ಮೈಸೂರು ಪ್ರ. ಪ್ರ. ಸಭೆಯು ಡಿಸೆಂಬರು 11 ಕ್ಕೆ ನಡೆಯಬಹುದೆಂದು ಹೇಳಲಾಗಿದೆ.

ನಿರ್ಬಂಧ

ಮೈಸೂರು ಸಂಸ್ಥಾನದಲ್ಲಿ ಸರಕಾರದ ಅಪ್ಪಣೆಯಿಲ್ಲದೆ ಯಾರೂ ಮೋಟಾರುಗಳನ್ನು ಮಾರಕೂಡದೆಂದು ಸರಕಾರದ ಆಜ್ಞೆಯಾಗಿದೆ.

ಉಪನ್ಯಾಸ

ಮೈಸೂರು ಸಿಟಿ ಕೊಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣಾ ಸಮಿತಿ ಆಶ್ರಯದಲ್ಲಿ ತಾ॥ 16 ರ ಸಂಜೆ 5 ಗಂಟೆಗೆ ಬ್ಯಾಂಕು ಸಭಾಂಗಣದಲ್ಲಿ ಸಂಸ್ಕೃತ ಕಾಲೇಜು ರಿ॥ ಪ್ರಿನ್ಸಿಪಾಲರಾದ ಶ್ರೀ ಚಂದ್ರಶೇಖರಶಾಸ್ತ್ರಿಯವರು 'ಸಹಕಾರ ಚಳವಳಿಯಲ್ಲಿ ಸರಕಾರದ ಕರ್ತವ್ಯ' ಎಂಬ ವಿಚಾರದಲ್ಲಿ ಭಾಷಣ ಮಾಡುತ್ತಾರೆ.

ಭಾರತ ಗೌ। ಜ। ನೆ.ಔಂಟ್‌ಬ್ಯಾಟನ್ನರು ಲಂಡ್ ತಲಪಿದನಂತರ ಬ್ರಿ॥ ಮುಖ್ಯಮಂತ್ರಿ ಅಟ್ಲಿಯವರನ್ನು ಕಂಡು ಮಾತುಕತೆಯಾಡಿದರು.

ಂ ಂ

ಹೈದರಾಬಾದಿನಿಂದ ಬೆಜವಾಡಾಕ್ಕೆ 6 ಸಾವಿರ ನಿರಾಶ್ರಿತರು ಬಂದಿರುವರು.

ಂ ಂ

ಬೆಂಗಳೂರಿನ ಹಿಂದೂಸ್ಥಾನ್ ಏವಿಯೇಶನ್ ಕಾರ್ಖಾನೆಯು ರಾಷ್ಟ್ರೀಯವಾಗಿ ಮಾಡಲ್ಪಡಬಹುದೆಂದು ಹೇಳಲಾಗಿದೆ.

ಂ ಂ

ಜುನಗಡ ವಿಷಯ ಪಾಕಿಸ್ತಾನಕ್ಕೆ ಸಂಬಂಧವಿಲ್ಲವೆಂದೂ, ಅದನ್ನು ಬಿಟ್ಟು ಕೊಡಲಾಗುವುದಿಲ್ಲವೆಂದೂ ಸರ್ದಾರ್ ಪಟೇಲರ ಸಿಂಹನಾದ.

ಂ ಂ

ನಿನ್ನೇ ದಿವಸ ಪಂ॥ ನೆಹರೂ ಕಾಶ್ಮೀರದಿಂದ ಬಂದಾಗ ಅಲ್ಲಿಂದ ತಂದಹೂ ಗೊಂಚಲನ್ನು ಗಾಂಧೀಜೀಗೆ ಅರ್ಪಿಸಿದರು!

ಂ ಂ

ಗೋವಾ ಬಲದರು ನೈಜದಮರಿಗೆ ಸೂರಲ್ಪಡುವುದಿಲ್ಲವೆಂದು ಹೇಳಲಾಗಿದೆ.

ಂ ಂ

ಕನ್ಯಾಕುಮಾರಿ ಭೂಪಿರದ ಹತ್ತಿರದ ಅಂದುಗ್ರಾಮಹಳ್ಳಿಯಲ್ಲಿ 2 ಹುಂಜಗಳು 22 ಹಾವುಗಳನ್ನು ಕೊಂದುಹಾಕಿವೆ.

ಂ ಂ

ಸಯಾಮಿನಲ್ಲಿ ಸ್ಥಾಪಿತವಾಗಿರುವ ಹೊಸ ಸಂಕಾರವು ಜನಪ್ರಿಯವಾಗಿಲ್ಲದಿದ್ದು ಅಲ್ಲ ಅಂತರ್ಯುದ್ಧವಾಗುವ ಸಂಭವವಿದೆಯೆಂದು ಹೇಳಲಾಗಿದೆ.

Woodlands

ಕಿಕ್ಕಿರಿದ ಜನಸಂದಣಿಯಿಂದ
ಕೂಡಿದ 3 ನೇ ವಾರ
ಅಶೋಕಕುಮಾರ್
ವೀರಾ, ಪ್ಯಾರೊ, ಪಾತ್ರವಹಿಸಿರುವ
ಶಿಕಾರಿ
(ಅವೋಘ ಹಿಂದಿ ಚಿತ್ರ)
ಪ್ರತಿ ದಿನ 3 ಆಟಗಳು

At Opera
4 th Glorious Week
MAD-MAN
.... with —
N.S.Krishnan T.A.Madhuram

Woodlands
Morning Shows at 10-30
From 14—11—47 For 4 days
Dead Reckoning
— starring —
Humphrey Bogart
Lizabeth Scott.

Edited, Printed and Publishe by Rao at the Satyavadi Press Chamaarja Agahar Mysore

ROYAL WEDDING

1) Princess Elizabeth at the age of one.

2) Princess Elizabeth on her 18th birthday with her grandmother Queen Mary.

3) Dr Geoffrey Fisher Archbishop of Canterbury and Primate of All England who will officiate at the wedding ceremoney.

4) Lt Philip Mountbatten.

5) Princess Elizabeth.